

ಕಪ್ಪಾಗಿತ್ತು. ಸಗಣೆನೀರು ಹಾಕಿ ಒಪ್ಪ ಮಾಡಿದ ಮಣ್ಣಿನ ಚಿಟ್ಟೆ. ಇಟ್ಟಿಗೆ ಗೋಡೆ. ಮೇಲೆ ಮಣ್ಣಿನ ಪದರ. ಒಳಗೆ ಒಂದು ಕೋಣೆ, ಅದು ಜಗುಲಿಯೂ ಹೌದು. ಪರಿಚಯಿಸಿಕೊಂಡು ಮಾತಿಗೆ ಕುಳಿತೆವು.

ಮೂವತ್ತೇಳು ವರ್ಷದ ಹಿಂದಿನ ಪ್ರಾಯದಲ್ಲಿ ಆಗುಂಬೆಯ ಘಟ್ಟ ಹತ್ತುವಾಗ ಕೊರಗ್ಗಾಂಡರ ಯೌವನದ ಬೆನ್ನು ಗಟ್ಟಿಯಿತ್ತು. ಅಲ್ಲಿ ಇಲ್ಲಿ ತೋಟದ ಕೆಲಸ ಮಾಡುತ್ತ ಭತ್ತ ಬೆಳೆಯುವ ಕನಸು ಕಂಡರು. ಅಮೂರ್ತ ಆಸೆಗಳಿಗೆ ರೂಪು ಕೊಡುವಾಗ ಹರಿದ ಬೆವರಿನ ಪರಿಮಳ ಆ ಪರಿಸರದ ಪ್ರತಿ ಎಲೆಗೂ ಅಂಟಿದ್ದವು. ಕಾಳಿಂಗ ಸರ್ಪ ಹರಿಯುವ ನೆಲದಲ್ಲಿ ಬಿಡಾರ ಹೂಡುವಾಗ ಚಿಗುರಿದ್ದ ಗಿಡದ ಕುಡಿಗಳು ಕೊರಗ್ಗಾಂಡರ ಜೊತೆಗೆ ಬೆಳೆದವು. ಮಳೆಯಲ್ಲಿ ನೆನೆದವು. ಚಳಿಗೆ ಕಂಗಾಲಾದವು. ಅಪರಾತ್ರಿ ಕಾಡುಕೋಣ ಕೂಗಿದಾಗ, ಅವುಗಳ ಹಿಂಡಿನ ಧುಮುಧುಮು ಓಡಾಟದ ಹೆದರಿಸುವ ಸದ್ದಿಗೆ ನಿದ್ದೆಯಿಂದ ಬೆಚ್ಚಿ ಎದ್ದು ಕೂತರು. ಹಸಿ ಗದ್ದೆ ಬಯಲಲ್ಲಿ ಬಿದ್ದ ಗೇಣಗಲ ಆಳದ ಹೆಜ್ಜೆ ಅಚ್ಚನ್ನು ಆಡುವ ಮಕ್ಕಳಿಗೆ ತೋರಿಸಿ ಅವರ ಬೆರಗು ಕಣ್ಣೊಳಗೆ ರಾತ್ರಿಯ ಹೆದರಿಕೆ ಮರೆತರು. ನಿದ್ದೆಗೆಡಿಸುವ ಅಪರಿಚಿತ ಸದ್ದಿನ ರಾತ್ರಿಗಳಲ್ಲಿ ಏನನ್ನು ಧ್ಯಾನಿಸುತ್ತ ಕಳೆದರೋ. ಅವರು ಬದುಕಿದ ಕಾನು ಖುಷಿ, ಭಯ, ಆತಂಕ ಎಲ್ಲವನ್ನು ಕೊಟ್ಟಿತು.

ಆಗುಂಬೆಯ ಪರಿಸರದಲ್ಲಿ ಕಾಡುಕೋಣದ ಧುಪಳಿಯಿಂದ ಅಡಿಕೆ ಸಸಿಗಳನ್ನು ಕಾಯುವುದು ಸಣ್ಣ ಮಾತಲ್ಲ. ಕೋಣಗಳ ಹಾವಳಿ ಹೆಚ್ಚಾದಾಗ ಕೊರಗ್ಗಾಂಡ ಘಟ್ಟ ಹತ್ತಿ ಬಂದಾಗಿನ ಕನಸುಗಳೆಲ್ಲ ಬತ್ತ. ಭತ್ತದ ಸಸಿಗಳು ನೆಲದ ಸಮ ಮಲಗಿದವು. ಅಡಿಕೆ ಗಿಡ ಕೋಣದ ಕಾಲ್ತುಳಿತಕ್ಕೆ ಸಿಕ್ಕು ನುಗ್ಗಾಯಿತು. ಪ್ರತಿವರ್ಷದ ಕತೆಯೂ ಇದೇ ಆದಾಗ ಬೇರೆ ಏನೂ ಕಾಣಲಿಲ್ಲ. ಭತ್ತದ ಬದಲು ಸೀಮೆಯಲ್ಲಿ ಯಾರೂ ನೆಡದ ಹಸಿಮೆಣಸಿನ ಗಿಡ ನೆಟ್ಟರು. ಕಾಡುಕೋಣಕ್ಕೆ ಭೇದವುಂಟೆ? ಅದನ್ನೂ ತಿಂದು ತೇಗಿತು. ರಾತ್ರಿ ನಿದ್ದೆಗೆಟ್ಟು ಕಾದರು. ಆಗ ಹಿಮ್ಮಡಿಗೆ ತಾಗಿದ ಮಿದುವಸ್ತುವೆಲ್ಲವೂ ಕಾಳಿಂಗಸರ್ಪ ಎನಿಸಿ ಬೆಚ್ಚಿದ್ದಿದೆ. ಮರಗಳ ಮಧ್ಯ ಮರವಾಗಿ ನಿಂತರು. ಅನೂಹ್ಯ ರಾತ್ರಿಗಳಲ್ಲಿ ನಗುವ ನಕ್ಷತ್ರಗಳು, ಹೊಟ್ಟೆಯಲ್ಲಿ ತಣ್ಣೀರು ತುಂಬಿಕೊಂಡ ಗಾಢ ಕಪ್ಪುಮೋಡಗಳು, ಅಲ್ಲೆಲ್ಲೋ ಧೂರ್ತರು ಮರ ಕಡಿಯುವ ಕರ್ಕಶ ಸಪ್ಪಳ, ದಿಗಂತದಲ್ಲಿ ಅಚ್ಚರಿಯಂತೆ ಉರುಳುವ ಉಲ್ಕೆಗಳ ಜೊತೆ ಅವರು ಏಕಾಂಗಿಯಾಗಿ ಬದುಕಿದ ಪರಿ ನನಗಂತೂ ಅಚ್ಚರಿ ಮೂಡಿಸಿತು.

ಕೊರಗ್ಗಾಂಡರಿಗೆ ಎರಡು ಗಂಡು ಮೂರು ಹೆಣ್ಣು, ಒಟ್ಟು ಐದು ಮಕ್ಕಳು. ಹೆಣ್ಣುಮಕ್ಕಳ ಮನೆ ಇರುವುದು ದೂರದ ಊರುಗಳಲ್ಲಿ. ಗಂಡು ಮಕ್ಕಳಿಗೆ ಅಭಿಪ್ರಾಯ ಭೇದ ಬಂದು ಪಕ್ಕದಲ್ಲೆ ಬೇರೆ ಮನೆ ಮಾಡಿದ್ದಾರೆ. ಚಿಕ್ಕ ಗೂಡಿನಂತ ಮಣ್ಣಿನ ಮನೆಯಲ್ಲಿ ಇವರೊಬ್ಬರೇ. ಮಕ್ಕಳ ಮನೆಯ ಎದುರಿಗೇ ಅಜ್ಜನ ಮಣ್ಣಿನ ಗೂಡು. ಮಕ್ಕಳಿಗೆ ಪೂರ ಜಮೀನು ಬರೆದುಕೊಟ್ಟಿಲ್ಲ. ಬೆನ್ನು ಬಾಗುವ ಈ ಹೊತ್ತಿಲ್ಲೂ ಕೊರಗ್ಗಾಂಡರು ಹುಮ್ಮಸ್ಸು ಕಡಿಮೆಯಾಗಿಲ್ಲ. ಸ್ವತಃ ಬೇಯಿಸಿಕೊಳ್ಳುತ್ತಾರೆ. ಸರ್ಕಾರದಿಂದ ಸ್ವಲ್ಪ ಹಣವೂ ಬರುತ್ತದೆ. ಬೆಳಗಿನ ಆದಷ್ಟು ಸಮಯ ತೋಟ, ಗದ್ದೆಯಲ್ಲಿ ಕಳೆಯುತ್ತಾರೆ. ಆಗದು ಎನಿಸಿತೋ ಬಂದು ಮಧ್ಯಾಹ್ನದ ಬಿಸಿಲು ಹರಿದ ಗದ್ದೆಯಲ್ಲಿ ನೋಟ ಇಳಿಬಿಟ್ಟು ಹಾಗೆಯೇ ನೋಡುತ್ತ ಕೂರುತ್ತಾರೆ. ಮತ್ತೊಂದು ಸಂಜೆ ಬೆಳಗು ಮಧ್ಯಾಹ್ನ ತನ್ನಿಂದ ತಾನೇ ಆಗುತ್ತದೆ.

ನಮ್ಮ ಎಲ್ಲ ಅಪೇಕ್ಷೆಯನ್ನೂ ಆಲಿಸುವ ಗುಣದ ಕಾಡು, ಬದುಕಲು ಬೇಕಾದ್ದನ್ನೆಲ್ಲ ಕಲಿಸುತ್ತದೆ. ಪ್ರಾಯದಲ್ಲಿ ದಟ್ಟ ಕಾಡಿನ ಸೆರಗಿನ ನಡುವೆ ಹೆಂಡತಿಯೊಡನೆ ಐದು ಮಕ್ಕಳ ತುಂಬು ಸಂಸಾರ ನಡೆಸಿದ ಕೊರಗ್ಗಾಂಡರ ಬದುಕಿಗೆ ಕಾಡು ಅಗತ್ಯದ ಲಾಲಿತ್ಯ ತುಂಬಿತು. ಜೀವನದ ಎಲೆ ಉದುರುವ ಹೊತ್ತಿಗೆ ದಿನಗಳು ಕಟುವಾದವು. ಕಾನು ಧೈರ್ಯ ತುಂಬಿತು. ನಾನಿದ್ದೇನೆ ಎಂದು ಅಭಯ ನೀಡಿತು. ಕೊರಗ್ಗಾಂಡ ಒಬ್ಬರೇ ಬದುಕುವ ನಿರ್ಧಾರ ಮಾಡಿದರು. ಎಲ್ಲ ಮುದಿ ಜೀವಗಳ ಕನಸು, ಆಸೆ ಮತ್ತು ಹತಾಶೆಗಳು ಕೊರಗ್ಗಾಂಡರ ಕಣ್ಣೆಂಬ ಬಾವಿಯಲ್ಲಿಯೇ ಇಂಗಿಹೋದಂತೆ ಭಾಸವಾಯ್ತು.

ಆಗುಂಬೆ ಭಯಂಕರ ಕಾಳಿಂಗಗಳು ತಿರುಗುವ ನೆಲ. ಕಾಳಿಂಗ ತಿರುಗುವ ನೆಲದಲ್ಲಿ ಚೂರು ಚರಪರ ಸಪ್ಪಳವಾದರೂ ಹಾವಿನ ಶಂಕೆ ಶುರುವಾಗುತ್ತದೆ. ಒಂದು ದಿನ ಹೆದರಿಸುವಷ್ಟು ದೊಡ್ಡ ಗಾತ್ರದ ಕಾಳಿಂಗ ಮನೆಯಂಚಿಗೆ ಕಾಣಿಸಿತಂತೆ. ಎದೆ ಝಲ್ ಆಯಿತು. ಕೊರಗ್ಗಾಂಡರು ಕೈಮುಗಿದು ನಿಂತರು. ಹಾವು ಸರಸರನೆ ಹರಿದು ಮನೆ ಹೊಕ್ಕಿತು. 'ನಾಗಪ್ಪಾ, ನಾವು ಮಾಂಸ ತಿನ್ನುವವರು. ಮಡಿ, ಮುಸುರೆ ಶಾಸ್ತ್ರ ಒಂದೂ ನಮಗೆ ಗೊತ್ತಿಲ್ಲ. ನಮ್ಮ ಮನೆಗೆ ನೀ ಬರುವುದು ಸರಿಯಲ್ಲ' ಎಂದು ಹೇಳಿ ಕಾಲುತಲೆ ನೆಲಕ್ಕೆ ತಾಗಿಸಿ ನಮಸ್ಕಾರ ಹಾಕಿದರು. ಹಾವಿಗೆ ಏನು ಕಂಡಿತೋ... ಬಂದಷ್ಟೇ ಸರಸರ ಹೊರಟಿತಂತೆ. ಆಮೇಲೆ ಊರಲ್ಲಿ ಸುದ್ದಿ ಹರಡಿ ಹತ್ತಿರದ ದೇವಸ್ಥಾನದಲ್ಲಿ ಯಾರೋ ಮೈಲಿಗೆ ಮಾಡಿದ್ದಕ್ಕೆ ಹಾವು ಬಂತು ಎಂದು ಗೊತ್ತಾಗಿ ಕಳವಳಪಟ್ಟರಂತೆ. 'ಅಜಾ, ಕಾಳಿಂಗ ಸರ್ಪದ ಕತೆ ಹೇಳು' ಎಂದಾಗ ನೆನಪಿನ ಪೇಳಿಯಿಂದ ತೆಗೆದು ಈ ಕತೆ ಹೇಳಿದರು.

ಅವರ ಮನೆಯ ದಾರಿಯಲ್ಲಿ ಹೊರಗಿನ ಜನ ಬರುವುದು ಅಪರೂಪ. ಹತ್ತಿರದಲ್ಲಿರುವ ಕಾಳಿಂಗಮನೆಗೆ ಎಲ್ಲೆಲ್ಲಿಂದಲೋ ಬರುವ ಸಂಶೋಧನಾರ್ಥಿಗಳು ಹಾದಿ ತಪ್ಪಿ ಕೊರಗ್ಗಾಂಡರಿದ್ದಲ್ಲಿ ಬಂದು ದಾರಿ ಕೇಳುವುದುಂಟು. ಕೊರಗ್ಗಾಂಡರ ಕಿವಿಯ ಮಿದು ತುದಿಗೆ ಚುಚ್ಚಿಕೊಂಡಿರುವ ಟಿಕ್ಕಿಯನ್ನು ಕುತೂಹಲದಿಂದ ನೋಡಿ ಫೋಟೊ ತೆಗೆದು ಹತ್ತಿಪ್ಪತ್ತು ರೂಪಾಯಿ ಕೈಲಿಟ್ಟಾಗ ಕವಳ ಹಾಕುವ ಉಮೇದಿಯಲ್ಲಿ ನಗುತ್ತಾರೆ.



ಅಪವಯಸ್ಸಲ್ಲಿ ಮಕ್ಕಳಿಂದ ದೂರವಿದ್ದು ಸ್ವತಂತ್ರವಾಗಿ ಬದುಕುವುದು ಅವರಿಗೆ ಕಾನು ಕಲಿಸಿದ ಸ್ವಾಭಿಮಾನವಾಗಿರಬಹುದು. ಗುಡ್ಡದ ಇಳಿಜಾರಿನಿಂದ ಮಳೆಗಾಲದಲ್ಲಿ ಹರಿದುಬರುವ ನೀರು, ಅದರ ಮಧ್ಯ ಹಾಯುವ ಸರ್ಪದ ಮರಿಗಳು. ತಣ್ಣನೆಯ ರಾತ್ರಿಯ ಅಪರಿಚಿತ ಧ್ವನಿಗಳು, ಅಭೇದ್ಯ ಕಾಡಿನ ಮಧ್ಯೆ ಆಗಾಗ ಕಾಣುವ ವಸತಿಯ ಚಹರೆಗಳು, ವರ್ಷಕ್ಕೊಮ್ಮೆ ನೆಂಟರಂತೆ ಭೇಟಿಯಿಡುವ ನಕ್ಸಲ್ ನಿಗ್ರಹ ದಳದ ಸದಸ್ಯರು... ಈ ಎಲ್ಲವನ್ನೂ ಕೊರಗ್ಗಾಂಡರು ತಮ್ಮ ಜೀವನಪ್ರೀತಿಯ ಪ್ರಭಾವಳಿಯಲ್ಲಿ ಅರಗಿಸಿಕೊಂಡಿರುವಂತೆ ಕಾಣಿಸಿತು.

ಕುಳಿತಷ್ಟು ಹೊತ್ತೂ ಹೊತ್ತು ಗೊತ್ತಾಗದೆ ಹೆಚ್ಚಾಗುತ್ತ ಹೋಗುತ್ತಿತ್ತು. ಹಾಲು ಹಾಕಿದರೆ ಕುಡಿಯುವ, ಹಾಕದಿದ್ದರೆ ತನ್ನ ಪಾಡಿಗೆ ಹೋಗುವ, ಸಿಕ್ಕಿದ್ದರಲ್ಲೇ ಹೊಟ್ಟೆ ತುಂಬಿಸಿಕೊಳ್ಳುವ ಅಜ್ಜನ ಮರಿಬೆಕ್ಕು ಯಾವುದೋ ಶಿಕಾರಿ ಮುಗಿಸಿ ನಾಲಿಗೆ ಚಪ್ಪರಿಸುತ್ತ ಗುಡ್ಡದ ಮೇಲಿಂದ ನಾವಿಳಿದ ಹಾದಿಯಲ್ಲೇ ಇಳಿದುಬಂತು. ಅಜ್ಜ ಮರಿಯನ್ನು ಎರಡೂ ಕೈ ಮುಂದೆಮಾಡಿ ಬರಕ್ಕನೆ ತೆಕ್ಕೆಯೊಳಗೆ ಅಪ್ಪಿಕೊಂಡ. ಅದು ಸಣ್ಣಗೆ ಮ್ಯಾಂವ್ ಅಂತು. ಅಜ್ಜನ ರೋಮಗಳು ಬೆಕ್ಕಿನ ಬಾಲದಷ್ಟೆ ಚುರುಕಾದವು. ಬೆಕ್ಕಿನ ಜೊತೆಗೆ ಒಳಹೊಕ್ಕ. ಅವನ ಹಿಂದೆ ಸುಳಿದ ಗಾಳಿಗೆ ನಮಸ್ಕರಿಸಿ 'ಬರುತ್ತೇವೆ ಅಜಾ' ಎಂದು ನಾವು ತಿರುಗಿ ಹೆಜ್ಜೆ ಹಾಕಿದೆವು.

■